ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ಅದಕ್ಕೆ ಹೆಸರು .....

ಅಧ್ಯಕ್ಷರು : ಆ ಕಾಮಗಾರಿ ಮುಗಿಯಲಿ, ಅದಕ್ಕೆ ಹೆಸರು ಇಡುವುದನ್ನು ನಂತರ ನೋಡೋಣ.

ರೈತರ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 12 : (85)

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್. ಡಿ. (ಹೊಳೇನರಸಿಪುರ)

ಉತ್ತರಿಸುವವರು : ಶ್ರೀ ಜಿ. ಜನಾರ್ಧನರೆಡ್ಡಿ (ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ರೈತರಿಂದ ವಶಪಡಿಸಿಕೊಂಡ ಜಮೀನೆಷ್ಟು;	ರೈತರಿಂದ 2593 ಎಕರೆಗಳಷ್ಟು ಜಮೀನನ್ನು ವಶಪಡಿಸಿಕೊಂಡಿದೆ.
ಆ.	ವಶಪಡಿಸಿಕೊಂಡ ಜಮೀನಿಗೆ ಪರಿಹಾರ ಕೊಡಲಾಗಿದೆಯೇ;	ಕೊಡಲಾಗಿದೆ.
ಇ.	ಹಾಗಿದ್ದಲ್ಲಿ, ಪ್ರತಿ ಎಕರೆ ಜಮೀನಿಗೆ ನೀಡಿದ ಪರಿಹಾರವೆಷ್ಟು;	ಮೊದಲ ಹಂತದ ಭೂಸ್ವಾಧೀನದಲ್ಲಿ ಕೃಷಿ ಭೂಮಿಗೆ ಎಕರೆ ಒದಕ್ಕೆ ರೂ.5.00 ಲಕ್ಷದಂತೆ ಹಾಗೂ ಕೃಷಿಯೇತರ ಪರಿವರ್ತಿತ ಭೂಮಿಗೆ ಎಕರೆ ಒಂದಕ್ಕೆ ರೂ.8.00 ಲಕ್ಷದಂತೆ ಪರಿಹಾರವನ್ನು 2001ನೇ ಇಸವಿಯಲ್ಲಿ ನೀಡಲಾಗಿದೆ. ಎರಡನೇ ಹಂತದ ಭೂಸ್ವಾಧೀನದಲ್ಲಿ ಪ್ರತಿ ಎಕರೆಗೆ ಕೆಲವು ಗ್ರಾಮಗಳ ಜಮೀನಿಗೆ ರೂ.25.00 ಲಕ್ಷ ಇನ್ನು ಕೆಲವು ಗ್ರಾಮಗಳ ಜಮೀನಿಗೆ ರೂ. 30.00 ಲಕ್ಷ ಮತ್ತು ರೂ. 42.00 ಲಕ್ಷಗಳಷ್ಟು ಪರಿಹಾರವನ್ನು 2006-07 ರಲ್ಲಿ ನೀಡಲಾಗಿದೆ. ಇದಲ್ಲದೆ, ಜಮೀನಿನಲ್ಲಿರುವ ಮರಮುಟ್ಟುಗಳಿಗೆ ಹಾಗೂ ಕಟ್ಟಡಗಳಿಗೆ ಸಹ ಪರಿಹಾರ ಧನವನ್ನು ನೀಡಲಾಗಿದೆ. ಅಲ್ಲದೆ, ಭೂಸ್ವಾಧೀನದಿಂದ ನಿರಾರ್ಶಿತಗೊಂಡ ಕುಟುಂಬಗಳಿಗೆ ಸರ್ಕಾರವು ಪುನರ್ವಸತಿ ಬಡಾವಣೆಯನ್ನು ದೇವನಹಳ್ಳಿ ತಾಲ್ಲೂಕಿನ ಸಮೀಪದ ಬಾಲೆಪುರ ಗ್ರಾಮದಲ್ಲಿ

		ನಿರ್ಮಿಸಿ, ಉಚಿತ ನಿವೇಶನವನ್ನು ಒದಗಿಸಿ ಕೊಡಲಾಗಿದೆ. ಇದರ ಜೊತೆಗೆ ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ, ಶಾಲಾ ಕಟ್ಟಡದ ಅಂಗನವಾಡಿ ಕಟ್ಟಡ ಮತ್ತು ದೇವಸ್ಥಾನಗಳನ್ನು ಪುನರ್ ನಿರ್ಮಾಣ ಮಾಡಲಾಗಿದೆ.
ಈ.	ವಶಪಡಿಸಿಕೊಂಡ ಜಮೀನಿನಲ್ಲಿ ಉಪಯೋಗಿಸಿಕೊಂಡ ಜಮೀನೆಷ್ಟು;	ವಶಪಡಿಸಿಕೊಂಡಿರುವ ಜಮೀನು-2593 ಎಕರೆ, ಸರ್ಕಾರಿ ಜಮೀನು ಅರಣ್ಯ ಇಲಾಖೆಗೆ ಸೇರಿದ ಜಮೀನು ಸೇರಿ - 1798 ಎಕರೆ, ಒಟ್ಟು 4391 ಎಕರೆಗಳಾಗಿದ್ದು ಇದರಲ್ಲಿ 409 ಎಕರೆ ಜಮೀನನ್ನು ಹೊರತುಪಡಿಸಿ, ಉಳಿದ ಜಮೀನನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಉಪಯೋಗಿಸಿಕೊಳ್ಳಲಾಗಿದೆ.
ಉ.	ಉಳಿದ ಜಮೀನನ್ನು ರೈತರಿಗೆ ವಾಪಸ್ಸು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ, ಉಳಿದ ಭೂಮಿಯನ್ನು ಅಂದರೆ, ಮೇಲೆ ತಿಳಿಸಿದ 409 ಎಕರೆ ಜಮೀನನ್ನು ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು / ಯೋಜನೆಗಳನ್ನು ಹಾಗೂ ಇನ್ನಿತರ ವಾಣಿಜ್ಯ ಯೋಜನೆಗಳನ್ನು ಸ್ಥಾಪಿಸಲು ಉಪಯೋಗಿಸಲಾಗುತ್ತಿದೆ. ಜೊತೆಗೆ ಕೆಲವು ಸರ್ಕಾರಿ / ಅರೆ ಸರ್ಕಾರಿ ಸಂಸ್ಥೆಗಳಿಗೂ ಕೊಡಲಾಗುತ್ತಿದೆ.
ಊ.	ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಜಮೀನು ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗ ನೀಡಲಾಗಿದೆಯೇ?	ಕೆಲವರಿಗೆ ನೀಡಲಾಗಿದೆ.
ಋ.	ಹಾಗಿದ್ದಲ್ಲಿ ಉದ್ಯೋಗ ಪಡೆದವರ ಹಾಗೂ ಉದ್ಯೋಗ ಪಡೆಯದವರ ಸಂಖ್ಯೆ ಎಷ್ಟು? ಉದ್ಯೋಗಕ್ಕಾಗಿ ಬಂದ ಅರ್ಜಿಗಳೆಷ್ಟು? ತಿರಸ್ಕೃತ ಗೊಂಡ ಅರ್ಜಿಗಳೆಷ್ಟು? ತಿರಸ್ಕೃತ ಗೊಂಡಿದ್ದರೆ ಕಾರಣಗಳೇನು?	ಉದ್ಯೋಗ ಕೋರಿ 492 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಪೈಕಿ 80 ಅರ್ಜಿದಾರರಿಗೆ ಉದ್ಯೋಗ ನೀಡಲಾಗಿದೆ. ಉಳಿದ 412 ಅರ್ಜಿಗಳನ್ನು ಹುದ್ದೆಗಳು ಖಾಲಿಯಿಲ್ಲದಿರುವುದರಿಂದ ಹಾಗೂ ಅಭ್ಯರ್ಥಿಗಳು ಸೂಕ್ತವಾದ ವಿದ್ಯಾರ್ಹತೆ, ನೈಪುಣ್ಯತೆಯನ್ನು ನಿರ್ದಿಷ್ಟ ಹುದ್ದೆಗಳಿಗೆ ಹೊಂದಿಲ್ಲದಿರುವುದರಿಂದ ಪರಿಗಣಿಸಿರುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಮಾರು 2,593 ಎಕರೆ ಜಮೀನನ್ನು acquire ಮಾಡಿದ್ದಾರೆ. ಮೊದಲನೆ ಹಂತದಲ್ಲಿ ಕೃಷಿ ಭೂಮಿಗೆ ಒಂದು ಎಕರೆಗೆ ಐದು ಲಕ್ಷ ರೂಪಾಯಿಯಂತೆ ಹಾಗೂ ಎರಡನೆ ಹಂತದಲ್ಲಿ ಒಂದು ಎಕರೆಗೆ 25 ರಿಂದ 42 ಲಕ್ಷ ರೂಪಾಯಿ ದುಡ್ಡು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಜೊತೆಗೆ ಮೊದಲನೆ ಹಂತದಲ್ಲಿ ಎಷ್ಟು ಜಮೀನು acquire ಆಯಿತು? ಎರಡನೆ ಹಂತದಲ್ಲಿ ಎಷ್ಟು acquire ಆಯಿತು? ಮೊದಲನೆ ಹಂತದಲ್ಲಿ acquire ಆದಂತಹ ಜಮೀನಿಗೆ 5 ಲಕ್ಷ ರೂಪಾಯಿ ಕೊಟ್ಟು, ಎರಡನೆ ಹಂತದಲ್ಲಿ acquire ಆದಂತಹ ಜಮೀನಿಗೆ 42 ಲಕ್ಷ ರೂಪಾಯಿ ಕೊಡಬೇಕಾದರೆ ಕಾರಣವೇನು? ರೈತರೆಲ್ಲರದು ಒಂದೇ ಕಡೆ ಇರುವಂತಹ ಜಮೀನಲ್ಲವೇ? ಏಕೆಂದರೆ ಮೊದಲನೆ ಹಂತದಲ್ಲಿ ರೈತರು ಯಾವ ತಕರಾರಿಲ್ಲದೆ ಜಮೀನು ಬಿಟ್ಟುಕೊಟ್ಟವರಿಗೆ 5ಲಕ್ಷ ರೂಪಾಯಿ, ಅದರ ಪಕ್ಕದಲ್ಲೇ ಎರಡನೆ ಹಂತದಲ್ಲಿ ಜಮೀನು ಕೊಟ್ಟವರಿಗೆ 42 ಲಕ್ಷ ರೂಪಾಯಿ ಎಂದರೆ ಇದು ನ್ಯಾಯವೇ? ಅದಕ್ಕೋಸ್ಕರ, ರೈತರೆಲ್ಲರಿಗೂ 42 ಲಕ್ಷ ರೂಪಾಯಿಯಂತೆ ಹಣವನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಆಸಕ್ತಿ ಇದೆಯಾ? ಇದಲ್ಲದೆ ಇನ್ನೂ ಸುಮಾರು 409 ಎಕರೆ ಜಮೀನು ಇದೆಯೆಂದು ಹೇಳುತ್ತಾರೆ. ಆ 409 ಎಕರೆ ಜಮೀನನ್ನು ಯಾವ ಉದ್ದೇಶಕ್ಕೆ ಇಟ್ಟಿದ್ದಾರೆ? ಅದನ್ನು ಯಾರಾದರೂ ಖಾಸಗಿಯವರಿಗೆ ಕೊಡುವ ಉದ್ದೇಶ ಇದೆಯೇ? ಅಥವಾ ಅದನ್ನು ಹರಾಜು ಮೂಲಕ ಕೊಡುವಂತಹ ಉದ್ದೇಶ ಇದೆಯೇ? ಅಥವಾ ಅದನ್ನು ಸರ್ಕಾರ ಬಳಸಿಕೊಳ್ಳುವಂತಹ ಉದ್ದೇಶವಿದೆಯೇ? ದಯಮಾಡಿ ಅದನ್ನು ತಿಳಿಸಬೇಕೆಂದು ನಾನು ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಸಚಿವರನ್ನು ಕೇಳುತ್ತೇನೆ.

ಶ್ರೀ ಜನಾರ್ಧನ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲು 2,993 ಎಕರೆ ಜಮೀನನ್ನು ರೈತರಿಂದ ವಶಪಡಿಸಿಕೊಳ್ಳಲಾಗಿದೆ. First Phaseನಲ್ಲಿ 2,469 ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. 2001ರಲ್ಲಿ ಸರ್ಕಾರ ಒಂದು ಎಕರೆ ಜಮೀನಿಗೆ ಐದು ಲಕ್ಷ ರೂಪಾಯಿ ಹಾಗೂ ಎಂಟು ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ. ಆನಂತರ 2006-07ರಲ್ಲಿ 2nd Phaseನಲ್ಲಿ ಕೇವಲ 124 ಎಕರೆ ಜಮೀನನ್ನು ಮಾತ್ರ ವಶಪಡಿಸಿಕೊಳ್ಳಲಾಗಿದೆ. ಆದುದರಿಂದ ಐದು ವರ್ಷದ gap ಬಂದಿರುವುದರಿಂದ, ಅದಕ್ಕೆ ತಕ್ಕಹಾಗೆ market value ಹೆಚ್ಚಾಗಿದ್ದು, ಒಂದು ಎಕರೆಗೆ 42 ಲಕ್ಷ ಹಾಗೂ 30 ಲಕ್ಷ ರೂಪಾಯಿಯನ್ನು ನಿಗದಿ ಮಾಡಿ ಜಮೀನಿಗೆ ಬೆಲೆಯನ್ನು ಕೊಟ್ಟಿದೆ. ಜೊತೆಗೆ 409 ಎಕರೆ ಜಮೀನು ಏನಿದೆ, ರಾಜ್ಯ ಸರ್ಕಾರದವರು ಅಲೈಯನ್ಸ್‌ನ್ನು different Stageನಲ್ಲಿ ತೆಗೆದುಕೊಂಡ ಮೇಲೆ 409 ಎಕರೆ BEL ನವರಿಗೆ ಅವಶ್ಯಕತೆಯಿಲ್ಲವೆಂದು ಆ ಜಮೀನನ್ನು ಸರ್ಕಾರದ ಕಡೆಗೆ ಏನು ಇಟ್ಟುಕೊಂಡಿದ್ದಾರೆ, ಅದರಲ್ಲಿ ಯೋಜನೆಗಳನ್ನು ಮಾಡಿ ಕೆಲವೊಂದು ಸಂಸ್ಥೆಗಳಿಗೆ ನೀಡಬೇಕೆಂದು ನಿಗದಿ ಮಾಡಿದ್ದಾರೆ. ಅದರಲ್ಲಿ ಸುಮಾರು ಎರಡೂವರೆ ಎಕರೆ ಜಮೀನನ್ನು BMTCಯವರಿಗೆ, 25 ಎಕರೆ ಜಮೀನನ್ನು MSIL ನವರಿಗೆ, 35 ಎಕರೆ Tourism Department ನವರಿಗೆ, 2 ಎಕರೆ Karnataka Beverages Corporation Limited ನವರಿಗೆ, 3ಎಕರೆ ಜಮೀನನ್ನು Meteorological

Department, Government of India ದವರಿಗೆ, 2ಎಕರೆ 24 ಗುಂಟೆಯನ್ನು Karnataka State Industrial Investment Development Corporationನವರಿಗೆ, ಈ ರೀತಿಯಾಗಿ ಎಲ್ಲರಿಗೂ ಕೊಟ್ಟಿದ್ದಾರೆ. ಉಳಿದಂತಹ ಜಮೀನನ್ನು ಯಾವ ರೀತಿಯಾಗಿ ಈಗ Central Business District, IT Park ಗಳನ್ನು, Finance District, health ಎಂದು ಹೇಳಿ ಕೆಲವೊಂದಕ್ಕೆ ನಿಗದಿ ಮಾಡಿದ್ದಾರೆ. ಅದಕ್ಕೆ ಇನ್ನೂ ಸರ್ಕಾರದ ಕಡೆಯಿಂದ implement ಮಾಡುವಂತಹ ಕೆಲಸವಾಗಿಲ್ಲ. ಈಗಾಗಲೇ ಹಿಂದೆ ಏನು ತೀರ್ಮಾನವಾಗಿದೆ, ಅದರ ಪ್ರಕಾರ ನಾವು implement ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಡಿ. ರೇವಣ್ಣ : 409 ಎಕರೆಯನ್ನು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಗೆ ವಹಿಸಿ ಹಾಕಿ ಉಳಿದಂತಹ ಜಮೀನನ್ನು auction ಮಾಡಬೇಕು ಎನ್ನುವುದು ಸರ್ಕಾರದ ತೀರ್ಮಾನವಾಗಿತ್ತು. ಆ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದೆಯೇ? ಅದನ್ನು ಬೇರೆ ಖಾಸಗಿಯವರಿಗೆ ಕೊಡುವುದಕ್ಕೆ ಆಸಕ್ತಿ ಇದೆಯೇ ಎನ್ನುವುದನ್ನು ತಿಳಿಸಬೇಕು. ಎರಡನೆಯದಾಗಿ ತಾವು ಐದು ವರ್ಷದ ಹಿಂದೆ 2001ರಲ್ಲಿ ಸುಮಾರು ಎರಡು ಸಾವಿರ ಎಕರೆ ಜಮೀನನ್ನು acquire ಮಾಡಿದ್ದೇವೆ ಎಂದು ಹೇಳಿದ್ದೀರಿ. ಏಕೆಂದರೆ ನಮ್ಮ ರಾಷ್ಟ್ರೀಯ ಹೆದ್ದಾರಿ ವಿಚಾರದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೇವಲ 50 ಸಾವಿರ ರೂಪಾಯಿ ಬೆಲೆ ಇರುವಂತಹ ಜಮೀನಿಗೆ 2 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಒಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೇಕಾದಂತಹ ಜಮೀನು ಕೊಟ್ಟಂತಹ ರೈತರಿಗೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ದುಡಿಯುವಂತಹ ಸಾಮರ್ಥ್ಯ ಇದೆ. ಆದುದರಿಂದ ಇವತ್ತು ಸರ್ಕಾರ ಪುನರ್ ಪರಿಶೀಲನೆ ಮಾಡಿ ಪಕ್ಕದ ಜಮೀನಿನ ರೈತರಿಗೂ ಕೊಟ್ಟಹಾಗೆ 42 ಲಕ್ಷ ರೂಪಾಯಿಯನ್ನು ಆ ರೈತರಿಗೂ ಏಕೆ ಕೊಡಬಾರದು? ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಆ ಎರಡು ಸಾವಿರ ರೈತ ಕುಟುಂಬದವರಿಗೆ 42 ಲಕ್ಷ ರೂಪಾಯಿಯಂತೆ ಹಣವನ್ನು ಕೊಟ್ಟರೆ ಆ ರೈತಾಪಿ ಜನರಿಗೆ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ ಇದೆ. ಈ ಎರಡೂ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ನಾನು Infrastructure Ministerರನ್ನು ಏನು ಕೇಳುವುದಕ್ಕೆ ಇಷ್ಟಪಡುತ್ತೇನೆಂದರೆ, Airport ಜಾಗ ಇವರಿಗೆ ಕೊಟ್ಟಿದ್ದೇವೆ. ಬೆಂಗಳೂರಿಗೆ International Airport ಬರಬೇಕೆಂದು ಇಷ್ಟೊಂದು ಸವಲತ್ತುಗಳನ್ನು ಮಾಡಿಕೊಟ್ಟರೆ, ಮಾನ್ಯ ಅಧ್ಯಕ್ಷರೆ, ತಾವು ದೆಹಲಿಗೆ ಹೋದಾಗ ಅಲ್ಲಿ International Airport ಅನ್ನು ನೋಡಿ ಇಲ್ಲಿ International Airport is very congested.

ಅಧ್ಯಕ್ಷರು : ಅವರ ಪ್ರಶ್ನೆ ಇರುವುದು ಬೇರೆ. ನೀವು ಮಾತನಾಡುತ್ತಿರುವ ವಿಚಾರದ ಬಗ್ಗೆ ತಾವು ಬೇರೆ notice ಕೊಡಿ. ಅದರ ಬಗ್ಗೆ ಚರ್ಚೆ ಮಾಡೋಣ. ಅದು ಪ್ರತ್ಯೇಕ ವಿಷಯ, ಅದನ್ನು ಮಾತನಾಡೋಣ. ಆ ವಿಷಯ ಬೇಡ. ಯೋಗೀಶ್ ಭಟ್ಟರೆ ತಾವು ಮಾತನಾಡಿ.

(ಗೊಂದಲ)

ಶ್ರೀ ಎಸ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ಒಂದೇ ಒಂದು ಅಂಶವನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಯಾವುದೇ ಕಾರಣಕ್ಕೂ ಆ ಜಮೀನನ್ನು auction ಮಾಡುವುದಕ್ಕೆ ಅವಕಾಶ ಕೊಡಬೇಡಿ. ಇದು Airport ಪಕ್ಕದಲ್ಲಿರುವಂತಹ land ಆಗಿರುವುದರಿಂದ, ರಕ್ಷಣೆಗೆ ಸಂಬಂಧಪಟ್ಟ ಹಾಗೆ ಭದ್ರತೆಯ ಕಾರಣದಿಂದ auction ಮಾಡುವುದಕ್ಕೆ ಅವಕಾಶ ಕೊಡದೇ, lease ಗೆ ಒಪ್ಪಿಗೆ ಕೊಟ್ಟಿತ್ತು, ಅದಕ್ಕೆ ಮಾನ್ಯತೆ ಕೊಡಬೇಕು. ಹಿಂದಿನ ಸಚಿವರು auction ಬಗ್ಗೆ ಬಹಳ ಒತ್ತಾಯ ಮಾಡುತ್ತಿದ್ದರು. Auctionಗೆ ಅವಕಾಶ ಕೊಡದೇ ಕೊನೆಗೆ leaseಗೆ ಕೊಡಬೇಕೆಂದು ಒಪ್ಪಿಗೆ ಕೊಟ್ಟಿರುವುದನ್ನು ಕೂಡ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್‌ಭಟ್‌ರವರು ಏನಾದರೂ ಮಂಗಳೂರು ಏರ್‌ಪೋರ್ಟ್ ಬಗ್ಗೆ ಕೇಳುತ್ತಿದ್ದಾರ? ಅಥವಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಕೇಳುತ್ತಿದ್ದಾರ? ಏಕೆಂದರೆ ನನಗೆ ಅನುಮಾನ ಇದೆ.

ಅಧ್ಯಕ್ಷರು : ಯೋಗೀಶ್ ಭಟ್‌ರವರೇ ದೇವನಹಳ್ಳಿ ವಿಮಾನ ನಿಲ್ದಾಣದ ಬಗ್ಗೆ ಕೇಳುತ್ತಿದ್ದೀರಾ ಅಥವಾ ಮಂಗಳೂರು ಏರ್‌ಪೋರ್ಟ್ ಬಗ್ಗೆ ಕೇಳುತ್ತಿದ್ದೀರಾ?

ಶ್ರೀ ಎಸ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ನಾನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿಯಲ್ಲಿ ಉಳಿದಿರುವಂತಹ 409 ಎಕರೆ ಬಗ್ಗೆ ಕೇಳುತ್ತಿದ್ದೇನೆ. ಹಾಸನದಲ್ಲಿ Airport ಅನ್ನು ಎಷ್ಟು ಕಡಿಮೆ ರೇಟ್‌ನಲ್ಲಿ ತಾವು acquire ಮಾಡಿದ್ದೀರಿ? ರೈತರಿಗೆ ಎಷ್ಟು ಕೊಟ್ಟಿದ್ದೀರಿ? ತನಿಖೆಯಾಗಲಿ.....

(ಗೊಂದಲ)

ಅಧ್ಯಕ್ಷರು : ಯೋಗೀಶ್‌ಭಟ್‌ರೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ರೇವಣ್ಣನವರೆ ನೀವು ಕೇಳಿ. ಈಗ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಯೋಗೀಶ್‌ಭಟ್‌ರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಈಗ ಹಾಸನದು, ಮಂಗಳೂರಿನ ವಿಚಾರ ಬೇಡ. ದೇವನಹಳ್ಳಿಗೆ ಅಷ್ಟೇ ಸೀಮಿತ ಮಾಡೋಣ.

ಶ್ರೀ ಹೆಚ್. ಡಿ. ರೇವಣ್ಣ : ಈಗ ಅವರು ಮಾತನಾಡಿರುವ ವಿಷಯ ನೀವು ರೆಕಾರ್ಡ್‌ನಿಂದ ತೆಗೆಸಿಹಾಕಿ, ಅದನ್ನು ರೆಕಾರ್ಡ್‌ನಿಂದ ತೆಗೆಸಿದರೆ ನಾನು ಹೇಳುತ್ತೇನೆ.

ಅಧ್ಯಕ್ಷರು : ರೇವಣ್ಣನವರೇ, ಯೋಗೀಶ್‌ಭಟ್‌ರವರನ್ನು ನೀವೇ ಎಬ್ಬಿಸಿದಿರಿ. ಅವರು ಹಾಸನದ ಬಗ್ಗೆ ಏನೂ ಮಾತನಾಡಿರಲಿಲ್ಲ, ಸುಮ್ಮನೆ ಕುಳಿತಿದ್ದರು.

12-00PM

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಅಧಿಕಾರದಲ್ಲಿ ಇಲ್ಲದೇ ಇರುವಾಗ ರೈತರ ಬಗ್ಗೆ ಮಾತನಾಡದೇ, ಇನ್ನು ಯಾರ ಬಗ್ಗೆ ಮಾತನಾಡುವುದಕ್ಕೆ ಆಗುತ್ತದೆ? ಮಾತನಾಡಲಿ ಬಿಡಿ.

ಅಧ್ಯಕ್ಷರು : ಶಿವಣ್ಣನವರೆ, ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ರೇವಣ್ಣ : ನನಗೆ clarification ಕೊಡುವ ಹಕ್ಕು ಇದೆ. ನನಗೆ Clarification ಕೊಡುವ ಹಕ್ಕು ಇಲ್ಲವೇ? ಅವರು ಮಾತನಾಡಲಿ, ಮಾತನಾಡುವುದಕ್ಕೆ ಅಡ್ಡಿ ಮಾಡುವುದಿಲ್ಲ.

ಅಧ್ಯಕ್ಷರು : ತಾವು ಮಂತ್ರಿಗಳನ್ನು ಕೇಳಿ, ಮಂತ್ರಿಗಳು ಉತ್ತರ ಕೊಡುವುದಕ್ಕೆ ಇದ್ದಾರೆ, ಎಲ್ಲರೂ ಏಕೆ ಉತ್ತರ ಕೊಡುತ್ತೀರಿ. ನೀವೆಲ್ಲಾ ಕುಳಿತುಕೊಳ್ಳಿ, ನೀವು ಯಾರು ಉತ್ತರ ಕೊಡುವುದು ಬೇಕಾಗಿಲ್ಲ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ clarification ಬೇಕಾಲ್ಲಾ.....

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಡುವುದಕ್ಕೆ ಇದ್ದಾರೆ. ಈ ರೀತಿ ವಾದ ಮಾಡಬಾರದು, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ ದಯವಿಟ್ಟು ಕುಳಿತುಕೊಳ್ಳಿ, ಶ್ರೀನಿವಾಸ್‌ರವರೆ ಕುಳಿತುಕೊಳ್ಳಿ. ಎಲ್ಲರೂ ಏಕೆ emotional ಆಗುತ್ತೀರಿ?

ಶ್ರೀ ಜಿ. ಜನಾರ್ಧನ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಹೇಳಿದ ಪ್ರಕಾರ, ಅಲ್ಲಿ main road ನಲ್ಲಿ ಜಮೀನಿನ ಬೆಲೆ ಎರಡು ಕೋಟಿ ರೂಪಾಯಿಗಳು ಬೆಲೆ ಇದೆಯೆಂದು ಈಗ ತಾವು ಹೇಳಿದ್ದೀರಿ. ಈಗಾಗಲೇ 83 ಎಕರೆ 24 ಗುಂಟೆ ಜಮೀನನ್ನು ಸರ್ಕಾರದ ಸಂಸ್ಥೆಗಳಿಗೆ ಕೊಡಬೇಕೆಂದು ಆಗಿದೆ. ಅದು ಯಾವ್ಯಾವ ವಿಷಯಗಳಿಗೆ ಎಂಬುದು ಆಗಿದೆ. ಈಗಾಗಲೇ ಒಂದು ಎಕರೆಗೆ ಮೂರು ಕೋಟಿ ರೂಪಾಯಿಗಳೆಂದು ಸರ್ಕಾರ ತೀರ್ಮಾನ ಮಾಡಿದೆ. ಇವೊತ್ತು ಸರ್ಕಾರಕ್ಕೆ ಹೆಚ್ಚಿನ ಲಾಭ ಬರುವ ನಿಟ್ಟಿನಲ್ಲಿ ಮಾಡಿದೆ.

ಶ್ರೀ ಹೆಚ್. ಡಿ. ರೇವಣ್ಣ : ತಾವು ಎರಡು ನಿಮಿಷ yield ಆಗಿ. ಅವರು ಒಟ್ಟಿಗೆ ಉತ್ತರವನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಪಕ್ಕದಲ್ಲಿ Industrial Minister ಇದ್ದಾರೆ.

ಅಧ್ಯಕ್ಷರು : ಈಗ ಬೇರೆ ವಿಷಯ ಬೇಡ, ತಾವು ನೇರವಾಗಿ ವಿಷಯವನ್ನು ಕೇಳಿ. ಈ ರೀತಿ ನೀವು ವಿಷಯವನ್ನು ಬೆಳೆಸುವುದರಿಂದ ನಾಲ್ಕು ಜನರು ಎದ್ದು ನಿಲ್ಲುತ್ತಾರೆ. ತಾವು ನೇರವಾಗಿ ಏನು ಪ್ರಶ್ನೆಯನ್ನು ಕೇಳಬೇಕೋ ಕೇಳಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷ ನಾನು ಕೇಳುತ್ತೇನೆ.

ಅಧ್ಯಕ್ಷರು : ಕೇಳಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಜನಾರ್ಧನ ರೆಡ್ಡಿಯವರಿಗೆ ವಿಷಯ ಗೊತ್ತಿಲ್ಲ, ಪಕ್ಕದಲ್ಲಿ Industrial Minister ಕುಳಿತುಕೊಂಡು ಅವರಿಗೆ ಪಾಠ ಹೇಳುತ್ತಿದ್ದಾರೆ.

ಶ್ರೀ ಸಿ. ಟಿ. ರವಿ : ನೀವು ಮಂತ್ರಿಯಾಗಿದ್ದಾಗ, ನೀವೇ ಎಲ್ಲಾ ಇಲಾಖೆಗಳನ್ನು handle ಮಾಡುತ್ತಿದ್ದೀರಿ. ಈಗ ಅವರೂ ಉತ್ತರವನ್ನು ಹೇಳುತ್ತಿದ್ದಾರಲ್ಲಾ? ಬೇರೆ ಏನು ಮಾಡುತ್ತಿಲ್ಲವಲ್ಲ?

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ, ಇಲ್ಲವೆಂದರೆ ನಾನು ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಈಗ ಪ್ರಶ್ನೋತ್ತರ ವೇಳೆಯಾಗಿದ್ದು ಎಲ್ಲಾ ವಿಷಯಗಳನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ಒಂದೇ ಪ್ರಶ್ನೆಯನ್ನು ಕೇಳುತ್ತಿರುವುದು. ಈಗ 409 ಎಕರೆಯನ್ನು ಯಾರಾದರೂ ಖಾಸಗಿಯವರಿಗೆ ಕೊಡುವ ಉದ್ದೇಶ ಇದೆಯೇ? ಅಥವಾ ಸರ್ಕಾರ ಹಿಂದೆ ಸಚಿವ ಸಂಪುಟ ಸಭೆಯಲ್ಲಿ ಇದನ್ನು ಸರ್ಕಾರದ ಸಂಸ್ಥೆಗಳಿಗೆ ಕೊಟ್ಟು ಬಾಕಿ ಉಳಿಕೆ ಜಮೀನನ್ನು ಹರಾಜು ಮಾಡಬೇಕೆಂಬ ಉದ್ದೇಶ ಇತ್ತಾ? ಈ ಎರಡು ಪ್ರಶ್ನೆಗಳಿಗೆ clarification ಕೊಡಲಿ, ಬೇರೆ ಏನೂ ಬೇಡ.

ಶ್ರೀ ಜಿ. ಜನಾರ್ಧನ ರೆಡ್ಡಿ : ಇನ್ನು ಉಳಿದಂಥ 409 ಎಕರೆಯಲ್ಲಿ 84 ಎಕರೆ ಅಲ್ಲದೇ ಉಳಿದಂಥ ಯಾವುದೇ ಜಮೀನಿನ ವಿಷಯದಲ್ಲಿ ಕೂಡ ನಾವು ಖಾಸಗಿ ಅಭಿವೃದ್ಧಿಗಾರರಿಗೆ ಅದನ್ನು ಲೀಸ್ ಆಧಾರದ ಮೇಲೆ ಕೊಡಬೇಕೆಂದು ಈ ಹಿಂದೆಯೇ ಸರ್ಕಾರದಲ್ಲಿ ದಿನಾಂಕ : 03-05-2008 ರಲ್ಲಿ ತೀರ್ಮಾನವಾಗಿದೆ. ಆದುದರಿಂದ ನಾವು ಇದನ್ನು auction ಮಾಡುವ ಪ್ರಶ್ನೆ ಇಲ್ಲ. ಇದನ್ನು ಲೀಸ್ ಆಧಾರದ ಮೇಲೆಯೇ ಅಭಿವೃದ್ಧಿ ಪಡಿಸುವುದಕ್ಕೆ ತೀರ್ಮಾನವಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ : ಅದಕ್ಕೆ ಏನಾದರೂ condition ಇದೆಯೇ?

ಅಧ್ಯಕ್ಷರು : ಈಗ ಲೀಸ್ ಮೇಲೆ ಎಂದು ಮಂತ್ರಿಗಳು ಉತ್ತರ ಹೇಳಿದ್ದಾರೆ. ತಾವು condition ಬಗ್ಗೆ ಕೇಳಬೇಕೆಂದರೆ ಬೇರೆ notice ಕೊಡಿ, detail ಆಗಿ question ಮಾಡಿ. ಈಗ ಮುಂದಿನ ಪ್ರಶ್ನೆ ಮಾನ್ಯ ನಾಡಗೌಡ ವೆಂಕಟರಾವ್‌ರವರ ಪ್ರಶ್ನೆ held over ಆಗಿದೆ. ನಿಮಗೆ ಮುಂದಿನ ವಾರದಲ್ಲಿ ಅವಕಾಶ ಕೊಡುತ್ತೇನೆ.

ಶ್ರೀ ನಾಡಗೌಡ ವೆಂಕಟರಾವ್ : ಮಾನ್ಯ ಅಧ್ಯಕ್ಷರೆ, ನನಗೆ ಸರ್ಕಾರದಿಂದ ಉತ್ತರ ಬಂದಿದೆ, ಎರಡು ನಿಮಿಷಗಳಲ್ಲಿ ಕೇಳುತ್ತೇನೆ.

ಅಧ್ಯಕ್ಷರು : ಬೇಡ, ನಾನು ನಿಮಗೆ ಮುಂದಿನ ವಾರ ಅವಕಾಶವನ್ನು ಕೊಡುತ್ತೇನೆ. ಅವರು re-quest ಮಾಡಿಕೊಂಡಿದ್ದಾರೆ, ಅವರೇ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಮಾನ್ಯ ನಾಡಗೌಡ ವೆಂಕಟರಾವ್‌ರವರೆ, ತಾವು ಕುಳಿತುಕೊಳ್ಳಿ.